


ಕಥೆ ಮತ್ತು ಚಿತ್ರ : ಪಿ. ಪುರುಷೋತ್ತಮ ಕಾರಂತ್

ಪ್ರಿಯ ಶಿಷ್ಯನೊಬ್ಬನು ತನ್ನ ಗುರುವಿಗೆ ನಮಿಸಿ ಹೀಗೆ ಬೇಡಿದನು : 'ಗುರುವೆ, ನನ್ನ ಕುಡಿತದ ಚಟ ಬಿಡಿಸಿ ನನ್ನನ್ನು ಕಾಪಾಡು." ಗುರುಗಳು ತಮ್ಮ ಶಿಷ್ಯನ ಅಸಹಾಯ ಕತೆಯನ್ನು ಕಂಡು ಮರುಗಿ ಸುಮ್ಮನಿದ್ದರು. ಶಿಷ್ಯನು ಮತ್ತೆ ಮತ್ತೆ ತನ್ನ ಬೇಡಿಕೆಯನ್ನು ಮುಂದಿರಿಸಿ ಗುರುವನ್ನು ಪೀಡಿಸುತ್ತಲೇ ಇದ್ದ. ಕೊನೆಗೊಮ್ಮೆ ಗುರುಗಳು ಹೇಳಿದರು, "ಸರಿ. ನೋಡು. ಮುಂದಿನ ಅಮಾವಾಸ್ಯೆಯಂದು ಮುಂಜಾನೆ ಆರರೊಳಗೆ ನನ್ನ ಮನೆಗೆ ಬಾ. ಮನೆ ಮುಂದೆ ನಿಂತು ನನ್ನನ್ನು ಕೂಗು." ಅಮಾವಾಸ್ಯೆಯ ದಿನದಂದು ಶಿಷ್ಯನು ಬಂದು ತನ್ನ ಗುರುವನ್ನು ಕರೆದನು. ಗುರುಗಳು ಮನೆಯೊಳಗಿಂದಲೇ 'ಓ' ಎಂದರು. ಹೊರಗಿನಿಂದ ಶಿಷ್ಯನು ನೂರಾರು ಬಾರಿ ತನ್ನ ಗುರುಗಳನ್ನು ಕರೆಯುತ್ತಲೇ ಇದ್ದನು. ಗುರುಗಳು ಒಳಗಿನಿಂದಲೇ ಪ್ರತಿ ಬಾರಿಯೂ ಓಗೊಡುತ್ತಿದ್ದರೇ ಹೊರತು ಹೊರಗೆ ಬರಲಿಲ್ಲ. ಹೀಗೇಕೆ ಎಂದು ತಿಳಿಯಲಾರದೆ ಶಿಷ್ಯನು ಕೂಗಿ ಕೂಗಿ ದಣಿದು ಗುರುಗಳ ಮನೆಯೊಳಗೆ ಬಂದು ನೋಡುತ್ತಾನೆ, ಗುರುಗಳು ಬಲವಾಗಿ ಕಂಬವೊಂದನ್ನು ಅಪ್ಪಿಕೊಂಡು ನಿಂತಿದ್ದಾರೆ! "ಏನಾಯಿತು? ಹೀಗೇಕೆ ನಿಂತಿದ್ದೀರಿ?" ಎಂದು ಶಿಷ್ಯ ಗುರುವನ್ನು ಕೇಳಿದ. ಆಗ ಗುರು 'ನೋಡು. ಈ ಕಂಬ ನನ್ನನ್ನು ಬಿಡುತ್ತಿಲ್ಲ. ನಿನ್ನ ಬಳಿಗೆ ಹೇಗೆ ಬರಲಿ?" ಎಂದು ತಮ್ಮ ದುಃಖ ತೋಡಿಕೊಂಡರು. ಆಗ ಶಿಷ್ಯನು ಆಶ್ಚರ್ಯದಿಂದ "ಕಂಬವನ್ನು ನೀವೇ ಹಿಡಿದುಕೊಂಡು ಇದ್ದೀರಿ! ಕಂಬವನ್ನು ದೂರಿ ಏನು ಪ್ರಯೋಜನ?" ಎಂದನು. ಆಗ ಗುರುಗಳು ನಗುತ್ತ ಹೇಳಿದರು, "ಅದೇ ರೀತಿ ನೀನೇ ಹಿಡಿದಿರುವ ಮದ್ಯದ ವ್ಯಸನವನ್ನು ನೀನೇ ಬಿಡಬೇಕಯ್ಯಾ!" ಎಂದರು.

ನೀತಿ:

ನಮ್ಮ ಅಭ್ಯಾಸಗಳ ವಿಷಯದಲ್ಲಿ ಬಹಳ ಎಚ್ಚರದಿಂದಿರಬೇಕು. ನಾವು ಮಾಡುವ ಪ್ರತಿಯೊಂದು ಕ್ರಿಯೆಯೂ ಸಂಸ್ಕಾರವಾಗಿ ನಂತರ ಅಭ್ಯಾಸವಾಗಿ ಪರಿಣಮಿಸುತ್ತದೆ. ಕೆಟ್ಟ ಅಭ್ಯಾಸಗಳಿಂದ ಬಿಡಿಸಿಕೊಳ್ಳುವುದು ಬಹಳ ಕಷ್ಟ. ಅದಕ್ಕೆ ವಿರುದ್ಧವಾದ ಒಳ್ಳೆಯ ಅಭ್ಯಾಸಗಳನ್ನೇ ಮತ್ತೆ ಮತ್ತೆ ಜ್ಞಾಪಿಸಿಕೊಳ್ಳುತ್ತ, ವಿವೇಚನೆಯಿಂದ ಮತ್ತು ಇತರರ ಸ್ನೇಹದಿಂದ ಅವುಗಳನ್ನು ಗೆಲ್ಲಬೇಕು. ✪

